ಉದ್ದ ಟೇಪಿನಂಥ ಬಿಳಿಬಾಲ ಬೀಸಿಕೊಂಡು ಹಾರಿ ಬರುತ್ತೆ. ಬರುವ ಮೊದಲು ಅದು ಕೂಗುತ್ತೆ. ಅಲ್ಲಿ ಅಗೋ ಆ ಪೊದೆಯೊಳಗೆ ಒಂದು ಕಡ್ಡಿ ಕಾಣ್ತಿದೆಯಲ್ಲ. ಹ್ಞಾ... ಅಲ್ಲಿ ಮಾಮೂಲಿಯಾಗಿ ಕೆಲ ಸೆಕೆಂಡು ಕೂರುತ್ತೆ. ಮತ್ತದು ಅಲ್ಲಿಂದ ಜಿಗಿದರೆ ಸೀದಾ ನೀರಿಗೆ ಬರೋದು. ಮಿಂಚಿನಂತೆ ಬಂದು ಇಲ್ಲಿರುವ ನೀರು ಕುಕ್ಕಿ ಹೋಗುತ್ತೆ. ನೋಡ್ತಾ ಇರಿ. ನೀವು ಹಕ್ಕಿಯ ಕೂಗನ್ನು ಆಲಿಸುತ್ತಲೇ ಅಲರ್ಟ್ ಆಗಬೇಕು. ನಾನು ಹಿಂದೆ ನಿಂತು ಸೂಚನೆ ಕೊಡ್ತೀನಿ' ಎಂದು ನ್ಯಾಚುರಲಿಸ್ಟ್ ಹೇಳಿದ್ದ. ಅವನ ಮಾತನ್ನೇ ನಂಬಿಕೊಂಡು ನಾವು ನಿಂತಿದ್ದೆವು. ಈ ಬಿಳಿ ಬಾಲದಂಡೆ ಹಕ್ಕಿಯ ಹಾರುವ ಚಿತ್ರ ತೆಗೆಯುವ ಆಸೆ ಎಂದಿಗೂ ನೀಗದ್ದು. ಆಸೆಗಣ್ಣುಗಳಿಂದ ಒಂದು ಕನಸಿನ ಚಿತ್ರಕ್ಕೆ ಹಾತೊರೆಯುತ್ತಾ ಕಾಯುತ್ತಿದ್ದೆವು.

ಯಾವ ದಿಕ್ಕಿನಿಂದ ಪಕ್ಷಿ ಬಂದು ಎಲ್ಲಿ ಕೂರುತ್ತದೆ ಎಂದೆಲ್ಲಾ ಒಂದು ಅಂದಾಜಿನ ಮಾಹಿತಿ ಪ್ರಕೃತಿ ತಜ್ಞನಿಗೆ ತಿಳಿದಿರುತ್ತೆ. ಇಂತಿಷ್ಟೇ ಹೊತ್ತು ಇಲ್ಲೇ ಕೂರುತ್ತೆ. ಹೀಗೀಗೆ ಪೋಸು ಕೊಡುತ್ತೆ ಎಂದು ಯಾರೂ ಹೇಳಲಾಗದು. ಪಕ್ಷಿಗಳು ಚಪಲಚಿತ್ತದ ಜೀವಿಗಳು. ಒಂದರ್ಥದಲ್ಲಿ ಹುಟ್ಟಾ ಕ್ರಾಕ್‌ಗಳು. ಒಂದು ಕಡೆಯೂ ನೆಟ್ಟಗೆ ಕೂರದೆ ಪುರ್ರ್ ಎಂದು ಒಮ್ಮೆಗೇ ಹಾರುವ ಕ್ಯಾತೆಗಳು. ಇವುಗಳ ಮನಸ್ಥಿತಿಯಲ್ಲಿ ಆ ಕ್ಷಣದಲ್ಲಿ ಏನೇನೂ ನಡೆಯುತ್ತೋ ಬಲ್ಲವರಾರು? ಯಾರು ಚುರುಕಾಗಿ ಕ್ಯಾಮೆರಾ ತಿರುಗಿಸಿ ಪಟ್ ಎಂದು ಫೋಟೋ ತೆಗೆದುಕೊಳ್ಳುತ್ತಾರೋ ಅವರಿಗೆ ಮಾತ್ರ ಹಕ್ಕಿ ಚಿತ್ರ ಸಿಗುವುದು. ಈ ಕೆಲಸ ನಿಖರವಾಗಿ ಮಾಡಿಕೊಳ್ಳಬೇಕಾದರೆ ಕ್ಯಾಮೆರಾ ಹೊತ್ತ ಟ್ರೈಪಾಡು ನೆಲದ ಮೇಲೆ ಗಟ್ಟಿಯಾಗಿ ಕೂತಿರಬೇಕು. ಕೊಂಚವೂ ಮಿಸುಕಾಡಬಾರದು. ನಮ್ಮ ಕಣ್ಣೋಟಕ್ಕೆ ನೇರವಾಗಿ ಕ್ಯಾಮೆರಾ ಹಿಂಬದಿ ಕಿಂಡಿ ನಿಲುಕುವ ಎತ್ತರದಲ್ಲಿ ಎಲ್ಲವೂ ಸಿದ್ಧವಾಗಿರಬೇಕು.

ನಲ್ಲಿಯಲ್ಲಿ ನೀರು ಬರುವ ಮೊದಲೇ ಖಾಲಿ ಕೊಡಪಾನ ಜೋಡಿಸಿಟ್ಟಂತೆ, ಅಲ್ಲಾಗಲೇ ತಮ್ಮ ಹಕ್ಕು ಸ್ಥಾಪನೆಯ ಟ್ರೈಪಾಡುಗಳನ್ನು ಅನೇಕರು ಮುಂಗಡವಾಗಿ ಪ್ರತಿಷ್ಠಾಪಿಸಿದ್ದರು. ಇದರಲ್ಲಿ ಮೇಲೆ ರೇಗಾಡುತ್ತಿದ್ದ ಮನುಷ್ಯನೂ ತನ್ನ ಝುಂಡಾ ಊರಿದ್ದ. ಹೊಸ ಟ್ರೈಪಾಡ್ ಕೊಂಡು ತಂದಿದ್ದ ಆತನಿಗೆ ಅದನ್ನು ಬಿಚ್ಚಿ ಸರಿಯಾಗಿ ನಿಲ್ಲಿಸಿಕೊಳ್ಳುವ ತರಖೀಬು ಗೊತ್ತಿರಲಿಲ್ಲ. ಟ್ರೈಪಾಡಿನ ಮೂರು ಕಾಲುಗಳನ್ನು ನೆಲದ ಮೇಲೆ ವಿಸ್ತರಿಸಿಕೊಳ್ಳುವ ಸರಳ ವಿಷಯವೂ ಗೊತ್ತಾಗುತ್ತಿರಲಿಲ್ಲ. ಕ್ಯಾಮೆರಾವನ್ನು ಟ್ರೈಪಾಡು ಹೆಡ್ಡಿಗೆ ಪೋಣಿಸಿ ಇಟ್ಟುಕೊಳ್ಳಲಾಗದೆಯೂ ಚಡಪಡಿಸುತ್ತಿದ್ದ. ಪದೇಪದೇ ಕ್ಯಾಮೆರಾ ಸ್ಟ್ಯಾಂಡಿನಿಂದ ತೆಗೆದು ಕೆಳಗಿಡುವುದು. ಸರಿ ನಿಂತ ಟ್ರೈಪಾಡನ್ನು ಮತ್ತೊಮ್ಮೆ ಕೆಳಗೆ ಮೇಲೆ ಎಳೆದಾಡಿ ಬ್ಯಾಲೆನ್ಸ್ ತಪ್ಪಿಸುವುದು. ಮತ್ತೆ ಹೊಸದಾಗಿ ಜೋಡಿಸಿ ಸರಿ ಮಾಡಿಕೊಳ್ಳಲು ಹೆಣಗಾಡುವುದು ನಡೆದಿತ್ತು. ಒಮ್ಮೆ ಹಿಂದಕ್ಕೆ ಚಲಿಸಿ ಕ್ಯಾಮೆರಾ ಗುರಿ ಚೆಕ್ ಮಾಡಿ, ಟ್ರೈಪಾಡ್ ಎತ್ತರವನ್ನು ಕೈಯಲ್ಲಿ ಅಳೆದು ನೋಡುತ್ತಿದ್ದ. ಮತ್ತೇನೋ ಎಡವಟ್ಟಾದವನಂತೆ ತಲೆ ಕೊಡವಿ ಮನೆ ಕಟ್ಟುವ ಇಂಜಿನಿಯರ್ ತರಹ, ಅತ್ತಿತ್ತ ಓಡಾಡಿ ಇದು ಸರಿ ಬರುತ್ತಿಲ್ಲವೆಂದು ಸಿಟ್ಟನಿಂದ ಥತ್ ಎಂದು ಗಲಿಬಿಲಿಗೊಳ್ಳುತ್ತಿದ್ದ. ಆತನ ಕಷ್ಟ ನೋಡಿ ಕರಗಿ, 'ನಾನು ಸಹಾಯ ಮಾಡಲೇ?' ಎಂದು ಮುಂದೆ ಹೋದೆ. ಕೆಂಗಣ್ಣು ಬೀರಿ, 'ನಾನಷ್ಟು ಅನ್ ಎಜುಕೇಟೆಡ್ ಅಲ್ಲ. ನಂಗೊತ್ತು. ಡೂ ಯುವರ್ ಜಾಬ್ ಪ್ರಾಪರ್ಲಿ' ಎಂದು ಆದೇಶಿಸಿದ. 'ಎಲಾ ಇವನಾ, ಹೆಲ್ಪ್ ಮಾಡಲು ಹೋದರೆ ಹೀಗಾ ರೇಗೋದು. ಯಾರೋ ಎಡವಟ್ಟು ಪ್ಯಾದೆ' ಎಂದು ಸುಮ್ಮನೆ ಸರಿದು ನಿಂತೆ. ನನಗಾದ ಅವಮಾನ ನೋಡಿ ಗೆಳೆಯರೆಲ್ಲಾ 'ಆಗಲಿ ಮಗನೆ ನಿನಗೆ' ಎಂದು ಸಂತೋಷ ಉಕ್ಕಿಸಿಕೊಂಡರು. ನನ್ನಂತೆಯೇ ಉದಾರವಾಗಿ ಸಹಾಯ ಮಾಡ ಹೋದ ಅನೇಕರು ಅವನಿಂದ ಇಕ್ಕಿಸಿಕೊಂಡು ಹಿಂತಿರುಗಿದರು.